# ಮದುವೆ ಯಾಕಾಗಬೇಕು?

ಮಧ್ಯರಾತ್ರಿ ಹನ್ನೆರಡಾಗಿತ್ತು, ಕರೆಂಟ ಬೇರೆ ಇಲ್ಲ, ನರಿ ಊಳಿಟ್ಟಹಾಗೆ ಶಬ್ದ, ನಡನಡುವೆ ಸಿಳ್ಳೆ ಹಾಕಿದ ಸದ್ದು, ಒಳ್ಳೆ ಹಾರರ(ಭಯಾನಕ) ಫಿಲ್ಮ ಹಿನ್ನೆಲೆ ಸಂಗೀತದಂತೆ... ಮಲಗಿದಲ್ಲೇ ಬೆವರಿದೆ, ಆದರೂ ಪಕ್ಕದಲ್ಲಿ ಇವಳಿದ್ದಾಳಲ್ಲ ಅಂತ ಖಾತ್ರಿ ಮಾಡಿಕೊಂಡು ಪುಕ್ಕಲು ಮನಸ್ಸಿಗೆ ಧೈರ್ಯ ತಂದುಕೊಂಡು, ಏನದು ನೋಡೇ ಬಿಡುವಾ ಅಂತ ಮೇಲೆದ್ದೆ, ಹಾಸಿಗೆಯಿಂದಿಳಿದು ಶಬ್ದಬರುವ ದಿಕ್ಕಿನೆಡೆಗೆ ನಡೆಯುತ್ತಿದ್ದರೆ ಒಮ್ಮೆಲೇ ಅಕಸ್ಮಾತ "ಏನಾಯ್ತು" ಯಾರೊ ಕರೆದ ಹಾಗಾಯ್ತು, ಮೋಹಿನಿ ಹಾಗೆ! ಬೆಚ್ಚಿದೆ... ಎದೆ ಢಬ್ ಢಬ ಬಡ್ಕೊತಾ ಇದ್ರೆ... ಕರೆದವ್ಳು ಬೇರೆ ಯಾರೂ ಅಲ್ಲ ನನ್ನ ಮನಮೋಹಿನಿ, ನನ್ನಾಕೆಯೇ, ಅಬ್ಬ ಬದುಕಿದೆಯಾ ಬಡಜೀವಾ ಅಂತಂದುಕೊಂಡು, ಸಾವರಿಸಿಕೊಂಡು "ಸದ್ದು ಕೇಳಿಸ್ತಾ ಇದೆಯ" ಅಂದೆ, ಯಾವುದೊ ಮೋಹಿನಿ ನನ್ನಷ್ಟೇ ಕಾಡುತ್ತಿದ್ದರೆ ಎನ್ ಮಾಡೊದು, "ಹಾಂ ಕೇಳಿಸ್ತಿದೆ", ಒಹ್ ಹಾಗಾದ್ರೆ ಅವಳಿಗೂ ಕೇಳ್ತಿದೆ, "ಅದೇ ಏನು ಅಂತ ನೋಡೊಣ ಅಂತ ಹೊರಟಿದ್ದೆ ಬ್ಯಾಟರಿ ಎಲ್ಲಿದೆ" ಅಂದೆ. "ರೀ ಅದು ನಮ್ಮಪ್ಪ ಗೊರಕೆ ಹೊಡೀತಾ ಇದಾರೆ" ಅಂದ್ಲು, ಮನಸ್ಸು ನಿರಾಳವಾಯ್ತು. ಹೀಗೆ ರಾತ್ರಿ ಎಚ್ಚರವಾದ್ರೆ ಮತ್ತೆ ನಿದ್ರೆ ಬರಲು ಘಂಟೆ ಸಮಯವೇ ಬೇಕು, ಮರಳಿ ಮಲಗಿದ್ದೆ, ಇವಳು ತಿವಿದೆಬ್ಬಿಸಿ ಕೇಳಿದ್ಲು "ರೀ ಮದುವೆ ಯಾಕಾಗಬೇಕು?". #$@*%*@$# ಎಲ್ಲ ಕಣ್ಣ ಮುಂದೆ ತಿರುಗಾಡಿತು.

ಅಲ್ಲಾ ಮಧ್ಯರಾತ್ರಿ ನಿದ್ರೆ ಬರದೇ ಹೊರಳಾಡುತ್ತಿರಬೇಕಾದ್ರೆ, ಮಡದಿ ಎಬ್ಬಿಸಿ ಹೀಗೆ ಕೇಳಿದ್ರೆ ಇನ್ನೇನಾಗಬೇಡ. "ಹಾಂ!! ಏನಿಲ್ಲ ಮದುವೆ ಆಗಿ, ಮಾವ ಮನೇಲಿ ಬಂದು ಮಲಗಿ, ಹೀಗೆ ಗೊರಕೆ ಹೊಡೀಲಿ ಅಂತ ಆಗಬೇಕು" ಅಂದೆ. "ರೀ ನಿಜ ಹೇಳ್ರೀ" ಅಂತ ಗೋಗರೆದಳು. "ಲೇ ಮೊದಲೇ ನಿದ್ರೆ ಬರ್ತಾ ಇಲ್ಲ ಅಂತ ನಾನು, ಮಧ್ಯರಾತ್ರಿ ನಿಂದೊಳ್ಳೆ ಕಾಟ ಆಯ್ತಲ್ಲ" ಅಂತ ತಿರುಗಿ ಮಲಗಿದೆ, ತಲೇಲಿ ಹುಳು ಬಿಟ್ಟ ಹಾಗೆ ಆಗಿತ್ತು, ಅದೇ ವಿಷಯ ಕೊರೆತ ಶುರುವಾಯಿತು. ಇವಳಪ್ಪನ ಗೊರಕೆ ಒಂದೇ ಅಲ್ದೇ ಇದೂ ನಿದ್ರೆ ಹಾಳು ಮಾಡಲು ಸೇರಿಕೊಂಡಿತು. ಅವಳೆಡೆಗೆ ತಿರುಗಿ ನಾನೂ ಕೇಳಿದೆ "ಹೌದು ಯಾಕಾಗಬೇಕು" ಅಂತ, ಅವಳು ಗಲ್ಲಕ್ಕೆ ಕೈಕೊಟ್ಟು ಮೊಣಕೈ ಮೇಲೂರಿ ಮಲಗಿದಲ್ಲಿಂದಲೇ, "ನಾನೂ ಅದನ್ನೇ ಕೇಳಿದ್ದು" ಅಂದ್ಲು.

ಹಾಗೂ ಹೀಗೂ ಯೋಚಿಸಿ ಯೋಚಿಸಿ ಮಲಗಿರಬೇಕು, ಮುಂಜಾವು ಇನ್ನೇನು ಸ್ವಲ್ಪ ನಿದ್ರೆ ಬಂದಿರಬೇಕು, ಎಬ್ಬಿಸಿದವಳ ಮೊದಲ ಪ್ರಶ್ನೆ ಮತ್ತದೇ, ನಾನೇನು ಎಲ್ಲ ಪ್ರಶ್ನೆಗಳಿಗೆ ಉತ್ತರ ಸಂಚಿಯಲ್ಲಿ ಕಟ್ಟಿಕೊಂಡು ತಿರುಗುತ್ತಿದ್ದೇನೆ ಅನ್ನೊ ಹಾಗೆ, ಇಕೊ ತೆಗೆದುಕೊ ಅಂತ ತೆಗೆದು ಕೊಡಬೇಕೇನೊ. "ಗೊತ್ತಿಲ್ಲ ಹೋಗೆ" ಅಂದೆ, "ಮತ್ತೆ ನೀವ್ಯಾಕೆ ಮದುವೆ ಆಗಿದ್ದು" ಅಂದ್ಲು, ಮೊದಲೇ ರಾತ್ರಿಯೆಲ್ಲ ನಿದ್ರೆಯಿಲ್ಲ ಹೀಗೆ ಜೊಂಪು ತೆಗೆದುಕೊಳ್ಳುವಾಗ ಎಬ್ಬಿಸಿದ್ರೆ, ರೇಜಿಗೆದ್ದು "ನಿಜವಾಗ್ಲೂ ಮದುವೆ ಆಗಲೇಬಾರದು, ದೊಡ್ಡ ತಪ್ಪು ಆಯ್ತು ಕಣೇ, ಆಗಲೇಬಾರದಿತ್ತು, ನನ್ನೀ ಮಹಾಪರಾಧವನ್ನು ಮನ್ನಿಸಿಬಿಡು ಮಹಾತಾಯಿ, ಮಲಗಲು ಬಿಡು" ಅಂತ ಬೇಡಿಕೊಂಡೆ. "ಆಗಿದ್ದು ಆಗಿ ಹೋಯ್ತು, ಈಗ ಯಾಕೆ ಆಗಬೇಕು ಅದನ್ನ ಹೇಳಿ" ಮತ್ತದೇ ರಾಗ. "ಆಗಿ ಹೋದ ಮೇಲೆ ಆ ಮಾತ್ಯಾಕೆ, **ಈಗೇನು ನಿನಗೆ ಡಿವೊರ್ಸ್ ಬೇಕಾ, ಪೇಪರು ಕೊಡು ಎಲ್ಲಿ ಸೈನ್ ಬೇಕೊ ಅಲ್ಲಿ ಮಾಡ್ತೀನಿ, ಹೆಬ್ಬೆಟ್ಟು ಒತ್ತಬೇಕಾ, ಹೆಬ್ಬೆಟ್ಟು ಯಾಕೆ ಇಡೀ ಕೈ ಒತ್ತುತ್ತೀನಿ ಬೇಕಿದ್ರೆ**" ಅಂತ ಹಾರಾಡಿದೆ, "ನಾನ್ ನಿಮ್ಮನ್ನ ಬಿಟ್ಟು ಕೊಡ್ತೀನಾ, ಅದೆಲ್ಲ ಏನೂ ಬೇಡ ನನ್ನ ಪ್ರಶ್ನೆಗೆ ಉತ್ತರಕೊಡಿ ಸಾಕು" ಅಂದ್ಲು, ಒಳ್ಳೆ ಜಿಡುಪು ಜಿಗಣೆ ತರಹ ಒಂದಕ್ಕೆ ಅಂಟಿಕೊಂಡರೆ ಬಿಡಲೊಲ್ಲಳು.

ನಿದ್ರೆಯಂತೂ ಹಾರಿ ಹೋಗಿತ್ತು, ಮಲಗಿದರೂ ಪ್ರಯೋಜನ ಇಲ್ಲವೆಂದು ಮೇಲೆದ್ದೆ, ಇವಳಪ್ಪ ಆಗಲೇ ಎದ್ದಿದ್ದರು, ಅವರ ತಲೆ ಕೂಡ ಸ್ವಲ್ಪ ಕೆಡಿಸಿದರಾಯ್ತು ಅಂತ, "ಒಳ್ಳೇ ನಿದ್ರೆಯಾಯ್ತು ಅಂತ ಕಾಣತ್ತೆ, ಟೀ ಆಯ್ತಾ" ಅಂದೆ, ಮತ್ತೆ ಗೊರಕೆ ಹೊಡೀತಿರಲಿಲ್ವಾ ಚೆನ್ನಾಗಾಯ್ತಾ ನಿದ್ರೆ ಅಂತೇನು ಕೇಳೊದು!. ಅಷ್ಟರಲ್ಲೇ ಅವಳು ಟೀ ಕೊಟ್ಲು, "ನಿಮ್ಮ ಮಗಳು ಮದುವೆ ಯಾಕಾಗಬೇಕು ಅಂತ ಕೇಳ್ತಿದಾಳೆ ನೋಡಿ" ಅಂದೆ, ಹಿರಿಯರು ಎನಾದ್ರೂ ಒಳ್ಳೆ ಉತ್ತರ ಕೊಟ್ಟಾರು ಅನ್ನೊ ಭರವಸೆಯೊಂದಿಗೆ, ಮುಗುಳ್ನಗುತ್ತ "ನಾವು ಮದುವೆ ಮಾಡಿಕೊಟ್ಟಾಯ್ತು, ಅವಳ ಪ್ರಶ್ನೆಗಳಿಗೆಲ್ಲ ಉತ್ತರ ನಿಮ್ದೇ" ಅಂತ ತಲೆಭಾರ ಕಳಚಿಕೊಂಡವರ ಹಾಗೆ ಹೊರಟು ಹೋದ್ರು. ಅವಳ ತರಲೆಗಳಲ್ಲಿ ಇದೂ ಒಂದು ಅಂದುಕೊಂಡಿರಬೇಕು.

ನನ್ನ ಹೆಗಲೇರಿದ ಈ ಪ್ರಶ್ನೆ ಕೆಳಗಿಳಿಯದಾಯಿತು, ಅವಳಪ್ಪ ಹೊರಟಾದ ಮೇಲೆ, ಅವಳು ಪಾಕಶಾಲೆಯಲ್ಲಿದ್ದಳು ಹೋಗಿ ಹಿಂದಿನಿಂದ ತಬ್ಬಿಕೊಂಡು, "ಇಂಥಹ ಮಧುರ ಕ್ಷಣಗಳಿಗಾಗಿ ಮದುವೆ ಆಗಬೇಕು" ಅಂದೆ, ಎನೂ ಮಾತಾಡಲಿಲ್ಲ, ಕೈಯಲ್ಲಿ ಸ್ಟೀಲಿನ ಪಾತ್ರೆಯಿತ್ತು ಅದನ್ನೇ ತೆಗೆದುಕೊಂಡು ಬಾರಿಸಿಯಾಳು ಅಂತ ದೂರ ಸರಿದು, ಅಂತೂ ಅವಳ ಬಾಯಿ ಮುಚ್ಚಿಸುವ ಉತ್ತರ ಕೊಟ್ಟೆನಲ್ಲ ಅಂತ ಹೆಮ್ಮೆಯಿಂದ "ಹೀಗೆ ನನ್ನ ಪತ್ನಿಯನ್ನು ನಾ ತಬ್ಬಿದರೆ ಯಾರೂ ಕೇಳಲ್ಲ, ಅದೇ ಪಕ್ಕದ ಮನೆ ಪದ್ದುಗೆ ಹೀಗೇ ಮಾಡೋಕೆ ಹೋದ್ರೆ ಅಷ್ಟೇ" ಅಂತ ವಿವರಣೆ ಬೇರೆ ಕೊಟ್ಟೆ. ತಿರುಗಿ "ಇಷ್ಟಕ್ಕೇ ಮದುವೆ ಆಗಬೇಕಾ?" ಅಂದ್ಲು. ನಾ ಹಲ್ಲು ಕಿರಿದು "ಕೈಲಿದೆಯಲ್ಲ, ಆ ಸ್ಟೀಲ ಪಾತ್ರೆ ಕೊಡು ನನ್ನ ತಲೆಗೆ ನಾನೇ ನಾಲ್ಕು ಕೊಟ್ಕೊತೀನಿ" ಅಂತಂದು ಹೊರಬಂದೆ.

ಇವರ ಉತ್ತರ ಯಾರು ಕೇಳಿದ್ರೆ ಸಿಗಬಹುದು ಅಂತ ಯೋಚಿಸಿದ್ರೆ, ಜೀವನದಲ್ಲಿ ಎಂಥಾ ಕಷ್ಟ ಬಂದ್ರೂ ಅಲುಗದೇ, ಕಲ್ಲಿನಂತೆ ನಿಂತು ಮುಂದೆ ಬಂದ ಗೆಳೆಯ ಕಲ್ಲೇಶಿ ನೆನಪಾದ, ಜೀವನ ಸಾಕಷ್ಟು ಪಾಠ ಕಲಿಸಿದೆ ಅವನಿಗೆ ಉತ್ತರ ಖಂಡಿತ ಗೊತ್ತಿರುತ್ತದೆ ಅಂತ ಅನಿಸಿತು, ಅವನಿಗೇ ಕರೆ ಮಾಡಿದೆ, ಕಲ್ಲೇಶಿ ಹೇಗಿದೀಯೋ ಅಂದ್ರೆ, ಗುಂಡುಕಲ್ಲು ಇದ್ದಹಾಗೆ ಇದೀನಿ ಅಂದ, ಸರಿ ಅವನು ಹಾಗೇ ಅದೇನೂ

ಹೊಸದಲ್ಲ ಬಿಡಿ, ಹೆಸರೇ ಕಲ್ಲೇಶಿ ಬೇರೆ. "ಲೋ ಮದುವೆ ಯಾಕೊ ಆಗಬೇಕು" ಅಂದೆ, "ನಿಂದ್ ಮದುವೆ ಆಯ್ತಲ್ಲೊ, ಈಗ್ಯಾಕೆ ಈ ಪ್ರಶ್ನೇ" ಅಂದ, "ಕೇಳಿದ್ದಕ್ಕೆ ಉತ್ತರ ಹೇಳೊ ಅಂದ್ರೆ ನೀನೊಳ್ಳೆ, ಈಗ್ ನೀನ್ಯಾಕಪ್ಪ ಮದುವೆ ಆದೆ" ಅಂದೆ, ಹೀಗೆ ಕೇಳಿದ್ರೆ ಉತ್ತರ ಸಿಗಬಹುದು ಅಂತ. "ನಮ್ಮವ್ವ ಮದುವೆ ಆಗು ಅಂದ್ಲು ಆದೆ" ಅಂದ, ಒಳ್ಳೆ ಅಮ್ಮನ ಮಗ. "ಅದೆ ಯಾಕೆ ಆಗು ಅಂದಿದ್ದು", ಹೋಗಿ ಆಕೇನೇ ಕೇಳು, ಅನ್ಲಿಲ್ಲ ಸಧ್ಯಕ್ಕೆ. ಅವನೇ ಹೇಳಿದ "ಜೀವನದಲ್ಲಿ ಒಂದು ಹಂತ ತಲುಪಿದ್ನಾ, ಕೆಲ್ಸ ಮನೆ ಅಂತ ಇದ್ನಾ, ಅವ್ವ, ಮಗಾ ಕಷ್ಟ ಪಟ್ಟು ಮೇಲೆ ಬಂದೆ, ಇನ್ನು ಮದುವೆ ಆಗಿ ಸುಖವಾಗಿರು ಅಂದ್ಲು, ಅದಕ್ಕೇ ಆದೆ" ಅಂದ, ಛೆ ಎಷ್ಟು ಕರೆಕ್ಟ ಅಲ್ವಾ, ಇದು ನನಗೆ ಹೊಳೀಲೇ ಇಲ್ಲ, ಉತ್ತರ ಸಿಕ್ತು ಅಂತ, "ಮತ್ತೇನೊ ಸುಖವಾಗಿದೀಯಾ ಅನ್ನು" ಅಂದೆ. "ಅಯ್ಯೋ ಮದುವೆ ಆದಮೇಲೆ, ಹೆಂಡ್ತಿ ಮಕ್ಳು ಅಂತ ಆಗಿ, ಇನ್ನೂ ಕಷ್ಟ ಜಾಸ್ತಿ ಅಗಿದೇ ಕಣಲೋ" ಅಂದ. ಮತ್ತೆ ತಲೆ ಎತ್ತದಂತೆ ಕಲ್ಲು ಚಪ್ಪಡಿ ಎಳೆದು ಮುಚ್ಚಿದ್ದ ಪ್ರಶ್ನೇನಾ, ಕಲ್ಲೇಶಿಯೇ ಎಳೆದು ಹೊರತೆಗೆದ.

ಕಲ್ಲೇಶಿ ಕಥೆ ಕೇಳಿ ಬೇಜಾರಾಗಿ, ಕೂತವನಿಗೆ, ಕಲ್ಯಾಣಿ ನೆನಪಾದಳು, ಅದೇ ಕಲ್ಯಾಣ ಮಂಟಪದ(ಮದುವೆ ಛತ್ರ) ಮ್ಯಾನೇಜರ! ಇವಳ ಫ್ರೆಂಡ್ ಬೇರೆ, ಎಷ್ಟ ಮದುವೆ ನೋಡಿರಲಿಕ್ಕಿಲ್ಲ ಅವಳು, ಮದುವೆ ಕೂಡ ಮಾಡಿಸ್ತಾಳೆ, ಅವಳಿಗಲ್ಲದೇ ಬೇರೆ ಯಾರಿಗೆ ಗೊತ್ತಿದ್ದೀತು ಅಂತ, ಪಕ್ಕದ ರೋಡಿನಲ್ಲೆ ಛತ್ರ ಇದೆಯಂತ ಖುದ್ದು ಅಲ್ಲಿಗೇ ಹೋದೆ. "ಎನ್ ಸರ್ ಮದುವೆ ಆದ ಮೇಲೆ ಅಪರೂಪ ಆಗಿದೀರ, ಬಂದೇ ಇಲ್ಲ, ಯಾರ ಮದುವೆಗೆ ಛತ್ರ ಬುಕ್ ಮಾಡೊಕೆ ಬಂದಿರಿ" ಅಂತ ಬರಮಾಡಿಕೊಂಡಳು. "ಮದುವೆ ಯಾಕಾಗಬೇಕು ಅಂತ ಹೇಳಿದ್ರೆ, ನಾನೇ ಇನ್ನೊಂದು ಆಗೋಣ ಅಂತ" ಅಂದೆ. "ಎಲ್ರೂ ಆಗ್ತಾರೆ ಅದಕ್ಕೆ" ಅಂದ್ಲು "ಅದೇ ಯಾಕೆ", ನಾ ಅದನ್ನೇ ಕೇಳಲು ಬಂದದ್ದಲ್ಲವೇ. "ಸರ್ ಹೆಣ್ಣು ಎಷ್ಟು ದಿನ ಅಂತ ಒಬ್ಬಂಟಿಯಾಗಿ ಇರ್ರೋಕೆ ಸಾಧ್ಯ ಹೇಳಿ, ಸಮಾಜ ಮಾತಾಡತ್ತೆ, ಈಗೆಲ್ಲ ಹಾಗೂ ಇರ್ತಾರೆ, ಆದ್ರೂ ಮದುವೆಯಾಗಿ ಗಂಡನಮನೆ ಸೇರಿದ್ರೆ, ಸುರಕ್ಷಿತ, ಅಲ್ಲದೇ ಆರ್ಥಿಕವಾಗಿಯೂ ಬಲ ಸಿಗ್ತದೆ, ಅದಕ್ಕೆ ಮದುವೆ" ಅಂದ್ಲು, ಅವಳು ಹೇಳಿದ್ದೂ ಸರಿ ಅನ್ನಿಸಿತು "ಮತ್ತೆ ನೀವು ಅದಕ್ಕೆ ಆದದ್ದು, ಹಾಗಾದ್ರೆ" ಅಂದೆ, "ಆಗಿದ್ದೇನೊ ಹಾಗೆ ಅಂತ ಕನಸು ಹೊತ್ತು, ನಿಮ್ಮಲ್ಲೇನು ಮುಚ್ಚು ಮರೆ, ನಿಮ್ಮಾಕೆ ನಿಮ್ಮನ್ನು ಬಿಟ್ರೆ ನನಗೂ ಇಲ್ಲಿ ಹೇಳಿಕೊಳ್ಳೊಕೆ ಯಾರಿದಾರೆ, ಮನೆಗೆ ಹೋಗೊಕೆ ಹೆದರಿಕೆ ಆಗತ್ತೆ ಈಗೀಗ, ಕುಡಿದು ಮನೆಗೆ ಬರ್ತಾರೆ, ಸುಮ್ನೇ ಜಗಳ, ಹೊಡೆಯೋಕೆ ಬರ್ತಾರೆ, ಎಲ್ಲಿ ಸುರಕ್ಷಿತ ಸರ್, ನಾನು ಗಳಿಸಿದ್ದೂ ಅವರ ಕೈಗೇ ಕೊಡಬೇಕು, ಮನೆ ನಡೆಸೊದೇ ಕಷ್ಟ" ಅಂದ್ಲು. ಮದುವೆ ಯಾಕೆ ಆಗಬೇಕು ಅಂತ ಇದ್ದ ನನ್ನ ಪ್ರಶ್ನೆ ಈಗ, ಮದುವೆ ಯಾಕಾದ್ರೂ ಆಗಬೇಕು ಅಂತ ಆಗಿತ್ತು.

ಹೆದರಬೇಡ, ನಾವಿಲ್ವಾ, ಇನ್ನೊಮ್ಮೆ ಹಾಗೇನಾದ್ರೂ ಆದರೆ ನಮಗೆ ಫೊನು ಮಾಡು, ನನಗೆ ಸಾಧ್ಯ ಆದಷ್ಟು ಹೆಲ್ಪ ಮಾಡ್ತೀನಿ ಅಂತ ಹೇಳಿ ಮನೆಗೆ ಮರಳಿದೆ, ಬಟ್ಟೆ ಒಣಗಲು ಬಿಸಿಲಿಗೆ ಹಾಕುತ್ತ ಟೆರೆಸಿನಿಂದಲೇ ನನ್ನ ನೋಡಿರಬೇಕು ಇವಳು, ತಲೆ ಕೆಳಗೆ ಮಾಡಿಕೊಂಡು ಅದೇ ಕಲ್ಯಾಣಿ ಕಥೆಯ ಯೋಚನೆಯಲ್ಲೇ ಮನೆ ಸೇರಿದೆ, ಒಳಗೆ ಬಂದು "ರೀ, ನಾನೇನು ನಿಮ್ಗೆ ಡಿವೊರ್ಸ್ ಕೊಟ್ಟು ಎಲ್ಲೂ ಹೋಗಲ್ಲ, ಯಾಕೆ ಅಷ್ಟು ಬೇಜಾರಾಗಿದೀರಾ" ಅಂದ್ಲು. ಸುಮ್ನೇ ಕೂತಿದ್ದೆ... "ರೀ ಏನಾಯ್ತು?" ಅಂದ್ಲು, ಆಗಿದ್ದೆಲ್ಲ ಹೇಳಿದೆ, ಅವಳೂ ಮರುಕಪಟ್ಟಳು. "ರೀ ನಿಮ್ಮ ಫ್ರೆಂಡ್ ಕಲ್ಲೇಶಿ ನನ್ನ ಫ್ರೆಂಡ ಕಲ್ಯಾಣೀನಾ ಮದುವೆ ಆಗಿದ್ರೆ ಎಷ್ಟು ಚೆನ್ನಾಗಿ ಇರ್ತಿತ್ತಲ್ವಾ, ಇಬ್ರೂ ಒಳ್ಳೆ ಜೋಡಿ ಆಗಿರೋರು" ಅಂದ್ಲು, ಬ್ರಹ್ಮ ಬೆಸೆಯೋ ಬಂಧಗಳೇ ವಿಚಿತ್ರ, **ಒಮ್ಮೆಲೇ, ಬದುಕನ್ನು ರಿವೈಂಡ ಮಾಡಿ ಮೂರುವರ್ಷ ಹಿಂದೆ ತೆಗೆದುಕೊಂಡು ಹೋಗಿ, ರೀಲು ಕತ್ತರಿಸಿ ಅವರಿಬ್ಬರನ್ನೂ ಜೋಡಿಸಿಬಿಡಲೇ ಅನ್ನಿಸಿತು, ಬದುಕು ಸಿನಿಮಾ ರೀಲಲ್ಲವಲ್ಲ!**

ಮಾಡಿದ ಊಟ ರುಚಿಸಲಿಲ್ಲ, "ಯಾಕೇ ನಿನಗೆ ಆ ಪ್ರಶ್ನೆ ತಲೇಲಿ ಬಂದದ್ದು" ಅಂದೆ, "ರೀ, ನನ್ನ ತಮ್ಮ ಇದಾನಲ್ಲ, ಹುಡುಗಿ ನೋಡಿ ನೋಡಿ ಬೇಸತ್ತು, ಸಾಕಾಗಿ ಮದುವೆ ಯಾಕೆ ಆಗಬೇಕು ಅಂತ ಕೇಳಿದ, ಹೌದಲ್ವಾ ಯಾಕೆ ಆಗಬೇಕು? ಅಂತ ನನಗೂ ಅನ್ನಿಸಿತು ಅದಕ್ಕೇ ನಿಮ್ಗೂ ಕೇಳಿದೆ" ಅಂದ್ಲು. ಇದೆಕ್ಕೆಲ್ಲ ಮೂಲ ಕಾರಣ ಅಲ್ಲಿದೆ, ಒಂದಿಲ್ಲೊಂದು ತೊಂದ್ರೆ ತಂದಿಡ್ತಾನೆ ನನಗೆ, ಆಮೇಲೆ ನೋಡ್ಕೊತೀನಿ ಅವನನ್ನ. "ನಾನೂ ಇಂಥದ್ದೇ ಪ್ರಶ್ನೆ ಕೇಳಿದ್ದೆ, ಅದಕ್ಕೆ ಸೋದರ ಮಾಮ, ಯಾಕೆ ಆಗಬೇಕು ಅಂತ ಕೇಳ್ತಿದಾನೆ ಅಂದ್ರೆ, ಎಲ್ಲೊ ಸನ್ಯಾಸಿ ಆಗಿ ಎಲ್ಲಿ ಮಠ ಸೇರಿಕೊಂಡು ಬಿಡ್ತಾನೆ ಏನೊ ನೋಡು ಅಂತ, ಅಮ್ಮನ ಕಿವಿಯೂದಿದ ಮದುವೆ ಮಾಡಿ ಬಿಟ್ಟರು" ಅಂದೆ. "ಓಹ್ ಅದಕ್ಕಾ ಮದುವೆ ಆಗಿದ್ದು" ಅಂದ್ಲು, "ಅಷ್ಟೇ ಏನಲ್ಲ, ಈ ನನ್ನಾಕೆ ಅಂತ ಬ್ಲಾಗ, ಲೇಖನ ಬರೀತಿದ್ನಾ, ಹುಡುಗೀರ ಕಾಟ ಜಾಸ್ತಿ ಆಯ್ತು! ಮದುವೆ ಯಾವಾಗ ಆಗ್ತೀರ ಅಂತಾ ಬೇರೆ ಕೇಳತೊಡಗಿದ್ರು, ನನಗೂ ಬ್ಯಾಚುಲರ ಲೈಫ್ ಸಾಕಾಗಿ, ಹೊರಗೆ ಹೊಟೇಲಲ್ಲಿ ತಿಂದು ತಿಂದು ಬೇಜಾರಾಗಿ, ಮದುವೆಗೆ ಓಕೇ ಅಂದುಬಿಟ್ಟೆ" ಅಂದೆ. ಮನೇಲಿ ತೂಫಾನು ಎದ್ದಿತು "ಓಹೋ ಯಾರೊ ಹೇಳಿದ್ರು ಅಂತ ಮದುವೆ ಆದಿರಿ, ಅಡುಗೆ ಮಾಡೊಕೆ ಅಡುಗೆಯಾಕೆ ಬೇಕಿದ್ಲು, ಯಾರೊ ಕೆಲಸದಾಕೆನಾ ಮದುವೆ ಆಗಬೇಕಿತ್ತು" ಅಂತ ಬಯ್ಯುತ್ತ ಎದ್ದು ಹೋದವಳು ಮೂರು ದಿನ ಮಾತಾಡಲಿಲ್ಲ ಮುನಿಸಿಕೊಂಡು.

ಮಾನವ ಮೂಲತಃ ಸಂಘಜೀವಿ, ಒಬ್ಬಂಟಿ ಒಂಟಿ ಸಲಗಗಳೂ ಇದ್ದಾರೆ, ಸಾಧನೆ ಮಾಡಿದ ಸನ್ಯಾಸಿಗಳೂ ಇದ್ದಾರೆ. ಅದ್ರೆ ಸಾಮಾನ್ಯ ಮನುಷ್ಯ ತನಗೆ ತಾನೆ ಕಟ್ಟಿಕೊಂಡು ನಿರ್ಧಿಷ್ಟ ನೀತಿ ನಿಯಮಗಳೇ ಸೇರಿ ಸಮಾಜ ಆಗಿದೆ, ಮದುವೆ ಅದರಲ್ಲೊಂದು ಅಂಗ, ಮಾನವ ಜನಾಂಗದ ಮುಂದುವರಿಕೆಗೆ ಸಂತಾನೋತ್ಪತ್ತಿ ಅಂತ ಅದರ ಮೂಲ ಉದ್ದೇಶ ಕೂಡ, ನಾಯಿ ನರಿಗಳಂತೆ ಜೀವಿಸದೇ ಮೌಲ್ಯಗಳೊಂದಿಗೆ ಜೀವಿಸಲು ಕಟ್ಟಿಕೊಂಡ ಕಟ್ಟುಪಾಡುಗಳು. ನನ್ನ ಜತೆ ನೀನು, ನಿನಗೆ ನಾನು, ಅಂತ ಭಾವನಾತ್ಮಕ ಬೆಂಬಲ ಕೂಡ ಅದೇ, ದೈಹಿಕ, ಆರ್ಥಿಕ, ಸಾಮಾಜಿಕ, ಮಾನಸಿಕ ಎಲ್ಲರೀತಿಯಿಂದಲೂ ಅಗತ್ಯ ಮತ್ತು ಸಬಲತೆಯೇ ಇದರ ಸೂತ್ರ. ಹಾಗೊ ಹೀಗೊ ಎಲ್ಲರೂ ಮದುವೆ ಆಗುತ್ತಾರೆ ಏನೋ ಒಂದು ಕಾರಣದಿಂದ. ಊರಲ್ಲಿ ಖಾಲಿ ಅಲೆಯುವವನಿಗೆ ಮದುವೆ ಮಾಡಿದರೆ ಜವಾಬ್ದಾರಿ ಬರುತ್ತದೆಂದು ಮದುವೆ ಮಾಡಿದರೆ, ವಯಸ್ಸಾಯ್ತು ನಮ್ಮ ಜವಾಬ್ದಾರಿ ಕಳೆದುಕೊಳ್ಳೊಣ ಅಂತ ತಂದೆ ತಾಯಿ ಮಗಳ ಮದುವೆ ಮಾಡಿ ಹಾಕುತ್ತಾರೆ, ಇನ್ನೋ ದೊಡ್ಡ ದೊಡ್ಡ ಶ್ರೀಮಂತರೂ,

ಬಿಸಿನೆಸ ಮ್ಯಾನಗಳ ಮಕ್ಕಳ ಮದುವೆ ಹಿಂದೆ ದೊಡ್ಡ ವ್ಯಾಪಾರಿ ತಂತ್ರವೇ ಅಡಗಿರುತ್ತದೆ, ಮದುವೆ ಮಾಡಿ ಹೊಸ ಕಂಪನಿಯ ಜವಾಬ್ದಾರಿ ಹೆಗಲಿಗೇರಿಸುತ್ತಾರೆ. ಹೀಗೇ ಮದುವೆ ಯಾಕೆ ಆಗಬೇಕು ಅನ್ನೊದಕ್ಕೆ ನಿರ್ಧಿಷ್ಟ ಕಾರಣಗಳಿಲ್ಲ ಅಂತ ನನ್ನನಿಸಿಕೆ, ಏನೊ ಕಾರಣ ಒಟ್ಟಿನಲ್ಲಿ ಮದುವೆ ಮಾತ್ರ ಅಗುತ್ತಾರೆ.

ಅವಳ ತಮ್ಮ ಒಬ್ಬನೇ ಸಿಕ್ಕ, "ಏನೊ ನನ್ನಾಕೆಗೆ ಏನೇನೊ ಪ್ರಶ್ನೆ ಕೇಳಿ, ತಲೆ ಕೆಡಿಸ್ತ ಇದೀಯ, ನನ್ನೊಂದಿಗೆ ಮಾತಾಡ್ತಾ ಇಲ್ಲ ಅವಳು ನಿನ್ನಿಂದಾಗಿ" ಅಂದೆ. "ಸಾರಿ ಭಾವ ನನ್ನಿಂದ ಎಷ್ಟು ತೊಂದ್ರೆ ನಿಮಗೆ" ಅಂತ ಚಡಪಡಿಸಿದ. "ಇನ್ನೊಮ್ಮೆ ಏನಾದ್ರೂ ಇಂಥ ತರಲೆ ಪ್ರಶ್ನೆ ಕೇಳಿದ್ರೆ, ಪ್ರಶ್ನೇನೆ ಕೇಳದ ಹಾಗೆ, ಬಾಬ್ ಕಟ್ ರೋಜಿ ಜತೆ ಮದುವೆ ಮಾಡಿಸಿಬಿಡ್ತೀನಿ" ಅಂತ ಧಮಕಿ ಹಾಕಿದೆ. "ಅವಳ್ನೆ ಮದುವೆ ಆಗಿಬಿಡ್ತೀನಿ, ನನಗೂ ಹುಡುಗಿ ಹುಡುಕಿ ಸಾಕಾಗಿದೆ" ಅಂತ ನಿರಾಸೆಯಿಂದ ನುಡಿದ, ಪಾಪ ಅನ್ನಿಸಿತು "ಏಯ್, ನಾನ್ ಜೋಕ್ ಮಾಡಿದ್ದೊ ಮಾರಾಯ, ಈಗ್ಲೆ ಹೀಗೆ ಸೋತರೆ ಹೇಗೆ ಇನ್ನೂ ಮದುವೆ ಆಗಬೇಕಿದೆ, ಏನೂ ಬೇಜರಾಗಬೇಡ, ನಾನು ನನ್ನಾಕೆ ಇಲ್ವಾ, ಒಳ್ಳೆ ಹುಡುಗಿ ತಂದು ಮದುವೆ ಮಾಡ್ತೀವಿ" ಅಂತ ಭರವಸೆ ತುಂಬಿದೆ ಹುಡುಗ ಚೇತರಿಸಿಕೊಂಡ, "ಏನಾದ್ರೂ ಲವ್... ಇದ್ರೆ ಹೇಳಪ್ಪ" ಅಂತ ಹುಬ್ಬು ಹಾರಿಸಿದೆ, ನಾಚಿ "ಇಲ್ಲ, ಏನೂ ಇಲ್ಲ ಭಾವ" ಅಂದ. "ನೀವೇ ನೋಡಿ, ನೀವು ಅಕ್ಕನೇ ಹುಡುಕೋದು" ಅಂದ. "ಬಿಡು ಮತ್ತೆ" ಅಂತ ಬೆನ್ನು ತಟ್ಟಿ ಹುರಿದುಂಬಿಸಿದೆ. "ಭಾವ ಅಕ್ಕ ಮಾತಾಡಿಸ್ತಾ ಇಲ್ವಲ್ಲ" ಅಂದ "ಏ, ಅದೇನು ಪ್ರಾಬ್ಲಂ ಅಲ್ಲ ಬಿಡು, **ಅವಳು ನನ್ನಾಕೆ ಕಣೊ, ಮದುವೆ ಆಗು ನಿನಗೂ ಗೊತ್ತಾಗತ್ತೆ**" ಅಂದೆ, ನಗುತ್ತಿದ್ದ.

ಮತ್ತೊಂದು ದಿನ ಹೀಗೇ ಮಲಗಿದ್ದೆ, ಅವರಪ್ಪನ ಗೊರಕೆ ಸದ್ದು ಇರಲಿಲ್ಲ, ನಿದ್ರೆ ಬರುವುದಿತ್ತು. ಮೌನ ವ್ರತದಲ್ಲಿದ್ದವಳು ಬಾಯಿ ಬಿಟ್ಟಳು "ರೀ" ಅಂತ ಅಲುಗಿಸಿದಳು, ಅಯ್ಯೋ ಮತ್ತಿನ್ಯಾವ ಪ್ರಶ್ನೇ ಹೊತ್ತು ತಂದಿದಾಳೊ ಅಂತ ಭಯ ಬಿದ್ದೆ. ಅವಳೆಡೆಗೆ ತಿರುಗಿದರೆ "ನಾ ಮಾತಾಡಿಸಲಿಲ್ಲ ಅಂದ್ರೆ, ನೀವೂ ಮಾತು ಬಿಡೊದಾ" ಅಂದ್ಲು, ಆ ಹೊದ್ದ ಹೊದಿಕೆಯ ಚುಂಗದಂತೆ ಬಂದ ದಾರಗಳನ್ನು ಕೈಯಲ್ಲಿ ಹೊಸೆಯುತ್ತ, ತಿರುಗಿಸುತ್ತ. ಇನ್ನೇನು ಇವಳು ಶಿಲಾಬಾಲಿಕೆಯ ಹಾಗೆ ಕಲ್ಲಿನಂತೆ ನಿಂತಿದ್ದರೆ ನಾ ಮುಂದೆ ನಿಂತು ಪೂಜಾರಿ ಮಂತ್ರ ಹೇಳಿದಂತೆ ಮಾತಾಡುತ್ತಿರಬೇಕೆ. ಗದ್ದ ಹಿಡಿದು, ಬಾಗಿದ್ದ ಅವಳ ಮುಖ ಮೇಲೆತ್ತಿದರೂ ನನ್ನಡೆಗೆ ದೃಷ್ಟಿಯಿಟ್ಟು ಮಾತಾಡುತ್ತಿರಲಿಲ್ಲ "ಕಲ್ಯಾಣಿ ಫೋನು ಮಾಡಿದ್ಲು", ಅಂದ್ಲು, "ಏನಾಯ್ತು" ಗಾಬರಿಯಾದೆ. "ಏನಿಲ್ಲ... ನಿನ್ನ ಗಂಡ ಏನ್ ಜಾದೂ ಮಾಡಿದ್ರೆ, ನಮ್ಮವರು ಪೀಡಿಸೋದು ದೂರದ ಮಾತು, ಕುಡಿಯೋದು ಕಮ್ಮಿಯಾಗಿದೆ, ಮೊನ್ನೆ ಫಿಲಂಗೆ ಕೂಡ ಕರ್ಕೊಂಡು ಹೋಗಿದ್ರು, ತುಂಬ ಥ್ಯಾಂಕ್ಸ ಕಣೇ, ನಿಮ್ಮ ಮದುವೆನೇನೊ ನಾನು ಮಾಡಿಸಿದೆ, ನನ್ನ ಮದುವೆನಾ ನೀವು ಕಾಪಾಡಿದ್ರಿ ಅಂತೆಲ್ಲ ಏನೇನೊ ಹೇಳಿದ್ಲು" ಅಂದ್ಲು. ನಿರಮ್ಮಳ ಭಾವ ಬಂತು, ಅಂತೂ ಒಳ್ಳೇದಾಯ್ತಲ್ಲ ಅಂತ. "ರೀ ಏನ್ ಮ್ಯಾಜಿಕ್ ಮಾಡಿದ್ರಿ" ಅಂದ್ಲು, "ಏನಿಲ್ಲ ಕಣೆ ಸ್ವಲ್ಪ ರಿಸ್ಕ ತೆಗೆದುಕೊಂಡೆ, ಆ ಏರಿಯ ಇನಸ್ಪೆಕ್ಟರ ನನ್ನ ಫ್ರೆಂಡ, ಹೆಲ್ಪ ಮಾಡು ಅಂದೆ, ಒಕೇ ಅಂದ, ಕಲ್ಯಾಣಿ ಗಂಡನ್ನ ಕರಿಸಿ 'ಕುಡಿದು ಗಲಾಟೆ ಮಾಡ್ತೀಯಾ, ಹೆಂಡ್ತಿ ಹೊಡೀತೀಯಾ, ಅಂತ ಕಂಪ್ಲೆಂಟ್ ಬಂದಿದೆ, ವಿಚಾರಣೆಗೆ ಹೋದ್ರೆ ನಿನ್ನ ಹೆಂಡ್ತಿ ನನ್ನ ಗೆಳೆಯನ ಕೈಲಿ ಫೊನು ಮಾಡಿಸಿ ಹೇಳಿಸಿದ್ಲು, ಅವನೂ ಹಾಗೇನಿಲ್ಲ ಅಂದಿದ್ದಕ್ಕೆ ಬಿಡ್ತಿದೀನಿ, ಅಷ್ಟೊಳ್ಳೆ ಹೆಂಡ್ತಿ ಇದಾಳೇ ಯಾಕೆ ಇದೆಲ್ಲ ನಿನಗೆ, ಇನ್ನೊಮ್ಮೆ ಕಂಪ್ಲೇಂಟ್ ಬಂದ್ರೆ.. ಗೊತ್ತಲ್ಲ..' ಅಂತ ಹೆದರಿಕೆ ಹಾಕಿಸಿದೆ, ಆಕೆ ಗಂಡನೂ ಹೆದರಿದ ಅನ್ಸತ್ತೆ ಎಲ್ಲ ಸರಿಯಾಗಿದೆ, ಸಮಾಧಾನ" ಅಂದೆ. ಅದಕ್ಕೆ ಪ್ರತಿಯಾಗಿ ನನ್ನಾಕೆಯಿಂದ ಹಣೆಗೊಂದು ಪಪ್ಪಿ ಸಿಕ್ತು, "ರೀ ಕಲ್ಲೇಶಿ" ಅಂದ್ಲು, "ವಿಮಾ ಏಜೆಂಟ ಕೊರ್ಸ್ ಮಾಡು ಅಂತ ಹೇಳಿದೀನಿ, ನನ್ನ ಕಾಂಟ್ಯಾಕ್ಟ್ಸ ಎಲ್ಲ ಕೊಟ್ಟಿದೀನಿ, ಆಗಲೇ ನಾಲ್ಕು ಜನ ಕಾಲ್ ಮಾಡಿ ಪಾಲಸಿ ಕೊಟ್ಟೀದಾರೆ ಅಂತಿದ್ದ, ಮುಂದೆ ಮ್ಯೂಚುವಲ ಫಂಡ ಮಾಡಿಸು ಅಂತ ಹೇಳಿದೀನಿ, ಕಮೀಷನ್ ಅಂತ ಆದರೆ ಜೀವನಕ್ಕೆ ಆಧಾರ ಅಗತ್ತೆ, ಮೊದಲೇ ಶ್ರಮಜೀವಿ, ಮಾಡ್ಕೊತಾನೆ ಅನ್ನೊ ನಿರೀಕ್ಷೆ ಇದೆ" ಅಂದೆ, ಈ ಸಾರಿ ಮುತ್ತಿನಮಳೆ ಸುರಿಯಿತು, "ಲೇ ಮದುವೆ ಯಾಕಾಗಬೇಕು?" ಅಂತ ಕೇಳಿದೆ. "ಯಾವ ಕಾರಣಕ್ಕೆ?, ಯಾಕೆ?... ನನಗೆ ಬೇಕಿಲ್ಲ, ಅದೇನೇ ಇರಲಿ ನೀವು ನನ್ನ ಮದುವೆ ಆದ್ರಲ್ಲ, ಅಷ್ಟ ಸಾಕು" ಅಂತಿದ್ದಳು. ಯಾಕೆ ಆದೆ ಅನ್ನೊಕಿಂತ, ಆಗಿದ್ದು ಒಳ್ಳೆದೇ ಆಯ್ತು ಅನಿಸುತ್ತಿತ್ತು ನನಗೂ... ನಿಮ್ಮಲ್ಲೂ ಹೀಗೆ ಅನೇಕ ಕಾರಣಗಳಿರಬಹುದು, ಹೊಸದಿದ್ದರೆ ಹಂಚಿಕೊಳ್ಳಿ, ಮತ್ತೆ ಮಂಥನದೊಂದಿಗೆ ಸಿಕ್ತೀವಿ. ನಾನು ನನ್ನಾಕೆ...

ಈ ಲೇಖನ ಬರೆಯುವಾಗ, ಯಾಕೆ ಆಗಬೇಕು ಅನ್ನೊಕಿಂತ ಅಗಿದ್ದು ಒಳ್ಳೇದೆ ಅನ್ನೊ ಭಾವದಲ್ಲಿ ಬರೆಯಲಾಗಿದೆ, ಕೆಲವರಿಗೆ ಯಾಕಾದ್ರೂ ಆದೆವೊ ಅನ್ನೋ ಭಾವನೆಯೂ ಇರಬಹುದು, ಅವರವರು ಬದುಕು ನೋಡುವ ಭಾವದಲ್ಲಿ ಅಡಗಿದೆ, ನಿಜವಾಗಿಯೂ ಮದುವೆ ಅನುಭವವಂತೂ ಇಲ್ಲ, ಆ ಮಟ್ಟಿಗೆ ನಾನು ಅನನುಭವಿ, ಎನದ್ರೂ ತಪ್ಪು ಬರೆದಿದ್ರೆ, ಅನುಭವಿಗಳು ಮನ್ನಿಸಿ. ಮದುವೆ ಅಂತಿದ್ದಂಗೆ ಬೆಚ್ಚಿಬೀಳುವವರ ನಡುವೆ ವಿಭಿನ್ನ ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನ ನನ್ನದು, ಆದರೆ ಎಲ್ಲ ಒಳ್ಳೇದೆ ಆಗುತ್ತದೆ ಅಂತೇನೂ ನಾನು ರುಜುವಾತು ಮಾಡಿ ತೋರಿಸುತ್ತಿಲ್ಲ, ಅದಕ್ಕೆ ನಾ ತೆಗೆದುಕೊಂಡ ಉದಾಹರಣೆಗಳೇ ಸಾಕ್ಷಿ, ಅಲ್ಲದೇ ಅವನ್ನು ಬಗೆಹರಿಸಲು ನಾ ಕೊಟ್ಟ ಪರಿಹಾರಗಳೂ ಸಿನಿಕತೆಯಿಂದ ಕೂಡಿವೆ, ನಿಜ ಜೀವನದಲ್ಲಿ ಎಲ್ಲ ಹಾಗಾಗಲಿಕ್ಕಿಲ್ಲ, ಅಷ್ಟು ಸುಲಭವಾಗಿ ಕ್ಲಿಷ್ಟ ಸಮಸ್ಯೆಗಳ ಬಿಡಿಸಲು ಆಗುವುದಿಲ್ಲ ಆದರೂ... ಕಲ್ಪನೆಯಲ್ಲಾದರೂ ಸರಿ... ಬದುಕಿನತ್ತ ಆಶಾಭಾವನೆಯಿಂದ ನೋಡುವ ತುಡಿತ...

ಇಷ್ಟೊತ್ತು ಓದಿದ್ದು ಇಷ್ಟಾ ಆದ್ರೆ ಮೆಚ್ಚಿ, ಸಿಟ್ಟು ಬಂದಿದ್ರೆ ಚುಚ್ಚಿ ಇಂಚೆ (ಇ-ಅಂಚೆ) ಹಾಕಿ... ನನ್ನ ವಿಳಾಸ pm@telprabhu.com .
ಹೀಗೆ ನೀವು ಓದಿ ಖುಶಿಯಾಗಿದ್ರೆ ನಿಮ್ಮ ಗೆಳೆಯರಿಗೂ ಇದನ್ನ ಕಳಿಸಿ, ಸಂತೋಷ ಇರೋದೇ ಹಂಚೋಕೆ ತಾನೆ...